**ಕರ್ನಾಟಕ ಸರ್ಕಾರ**

**ಸಂ.** ಆರ್‌ಡಿ 158 ಟಿಎನ್‌ಆರ್ 2020(ಭಾ-2)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು,ದಿನಾಂಕ:27.07.2020

**ಆದೇಶ**

ರಾಜ್ಯ ಸರ್ಕಾರವು, ಕೋವಿಡ್-19ರ ನಿಯಂತ್ರಣ ಮತ್ತು ನಿರ್ವಹಣೆಗೆ ಸಂಬಂಧಿಸಿದ ಆದೇಶಗಳು ಮತ್ತು ಸುತ್ತೋಲೆಗಳನ್ನು ಸಂಬಂಧಪಟ್ಟವರೆಲ್ಲರೂ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದಕ್ಕಾಗಿ ಕಾಲಕಾಲಕ್ಕೆ ಹೊರಡಿಸಲಾಗುತ್ತಿದೆ. ಬೆಂಗಳೂರು ಪ್ರದೇಶದಲ್ಲಿ ಕಳೆದ ಮೂರು ವಾರಗಳಿಂದೀಚೆಗೆ ಕೋವಿಡ್ ಪ್ರಕರಣಗಳು ಉಲ್ಬಣಗೊಂಡಿವೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸುತ್ತೋಲೆ ಸಂಖ್ಯೆ: ಆಕುಕ 225 ಎಸಿಎಸ್ 2020, ದಿನಾಂಕ: 15.07.2020ರಲ್ಲಿ ಕೋವಿಡ್-19 ರೋಗಿಗಳಿಗೆ ಸರ್ಕಾರವು ನಿರ್ದಿಷ್ಟಪಡಿಸಿದ ದರಗಳಲ್ಲಿ ಶೇಕಡಾ ೫೦ರಷ್ಟು ಹಾಸಿಗೆಗಳನ್ನು ಮೀಸಲಿಡುವಂತೆ ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ ನಿರ್ದೇಶಿಸಿದೆ. ಅಲ್ಲದೇ, ರಾಜ್ಯ ಸರ್ಕಾರವು, ಆದೇಶ ಸಂಖ್ಯೆ: ಕಂಇ 158 ಟಿಎನ್‌ಆರ್ 2020, ದಿನಾಂಕ: 19.07.2020ರಲ್ಲಿ ಖಾಸಗಿ ವೈದ್ಯಕೀಯ ಸಂಸ್ಥೆಗಳಲ್ಲಿ ಶೇಕಡಾ 50ರಷ್ಟು ಹಾಸಿಗೆಗಳು ಸರ್ಕಾರಿ ಕೋಟಾ ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಯ ಅಧಿಕೃತ ವ್ಯಕ್ತಿಗಳು ಉಲ್ಲೇಖಿಸುವ ರೋಗಿಗಳಿಗಾಗಿ ಲಭ್ಯವಾಗುವಂತೆ ನೋಡಿಕೊಳ್ಳಲು ಹಿರಿಯ ಅಧಿಕಾರಿಗಳನ್ನು ನೇಮಿಸಿದೆ.

ಅದರಂತೆ, ಸರ್ಕಾರವು ಹೊರಡಿಸಿದ ಆದೇಶಗಳು / ಸುತ್ತೋಲೆಗಳನ್ನು ಕೆಲವು ಖಾಸಗಿ ವೈದ್ಯಕೀಯ ಸಂಸ್ಥೆಗಳು ಮತ್ತು ಸಿಬ್ಬಂದಿಯವರು ಪಾಲಿಸದೆ, ಆ ಮೂಲಕ, ಕೋವಿಡ್-19 ಸೋಂಕು ಹರಡುವಿಕೆಯನ್ನು ನಿಯಂತ್ರಿಸುವ ಸರ್ಕಾರದ ಪ್ರಯತ್ನಗಳನ್ನು ವಿಫಲಗೊಳಿಸುತ್ತಿರುವ ಮತ್ತು ನಾಗರೀಕರ ಜೀವಗಳನ್ನು ವಿಪತ್ತಿಗೆ ಒಡ್ಡುತ್ತಿರುವ ಸಂಗತಿಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆದ್ದರಿಂದ, ವಿಪತ್ತು ನಿರ್ವಹಣಾ ಕಾಯ್ದೆ, 2005ರ 69ನೇ ಸೆಕ್ಷನ್ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ರಾಜ್ಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷನಾದ ಈ ಕೆಳಗೆ ಸಹಿ ಮಾಡಿರುವ ನಾನು, ಬಿ.ಬಿ.ಎಂ.ಪಿ. ಪ್ರದೇಶದಲ್ಲಿ ಕೋವಿಡ್-19 ಅನ್ನು ನಿಯಂತ್ರಿಸುವ ಮತ್ತು ನಿರ್ವಹಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರವು ಹೊರಡಿಸುವ ಆದೇಶಗಳು ಮತ್ತು ಸುತ್ತೋಲೆಗಳನ್ನು ಮತ್ತು ಪೂರಕ ವಿಷಯಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದಕ್ಕಾಗಿ ಆಯುಕ್ತರು, ಬಿಬಿಎಂಪಿ, ವಿಶೇಷ ಆಯುಕ್ತರು, ಬಿಬಿಎಂಪಿ ಮತ್ತು ಜಂಟಿ ಆಯುಕ್ತರು, ಬಿಬಿಎಂಪಿ ಇವರಿಗೆ ದಿನಾಂಕ: 14.04.2020 ಮತ್ತು 23.07.2020ರ ಸಮ ಸಂಖ್ಯೆಯ ಆದೇಶಗಳ ಅನ್ವಯ ಈಗಾಗಲೇ ಪ್ರತ್ಯಾಯೋಜಿಸಲಾದ

...2

ಅಧಿಕಾರಗಳು ಮತ್ತು ಪ್ರಕಾರ್ಯಗಳ ಜೊತೆಗೆ, ವಿಪತ್ತು ನಿರ್ವಹಣಾ ಕಾಯ್ದೆ, 2005ರ ಮೇರೆಗೆ ಈ ಕೆಳಗಿನ ಹೆಚ್ಚುವರಿ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಈ ಮೂಲಕ ಪ್ರತ್ಯಾಯೋಜಿಸಿರುತ್ತೇನೆ.

| ಕ್ರಮ ಸಂಖ್ಯೆ | ಪದನಾಮ | ವಿಪತ್ತು ನಿರ್ವಹಣಾ ಕಾಯ್ದೆ, 2005ರ ಮೇರೆಗೆ ಅಧಿಕಾರಗಳು ಮತ್ತು ಪ್ರಕಾರ್ಯಗಳ ಪ್ರತ್ಯಾಯೋಜನೆ |
|---|---|---|
| 1 | ಆಯುಕ್ತರು, ಬಿ.ಬಿ.ಎಂ.ಪಿ. | 22ನೇ ಸೆಕ್ಷನ್ 2ನೇ ಸಬ್-ಸೆಕ್ಷನ್ (ಎಚ್) ಖಂಡದ ಅಡಿಯಲ್ಲಿನ ಪ್ರಕಾರ್ಯಗಳು; 24ನೇ ಸೆಕ್ಷನ್ (ಎ), (ಬಿ), (ಎಫ್), (ಎಚ್), (ಜೆ), (ಕೆ) ಮತ್ತು (ಎಲ್) ಖಂಡಗಳ ಅಡಿಯಲ್ಲಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು ಮತ್ತು 51ನೇ ಸೆಕ್ಷನ್ (ಎ) ಮತ್ತು (ಬಿ) ಖಂಡಗಳು ಮತ್ತು 52, 53, 54 ಮತ್ತು 56ನೇ ಸೆಕ್ಷನ್‌ಗಳ ಅಡಿಯಲ್ಲಿನ ಹೆಚ್ಚುವರಿ ಅಧಿಕಾರಗಳು. |
| 2 | ಎಲ್ಲಾ ಅಪರ ಆಯುಕ್ತರು/ ವಿಶೇಷ ಆಯುಕ್ತರು/ ಜಂಟಿ ಆಯುಕ್ತರು, ಬಿಬಿಎಂಪಿ | 22ನೇ ಸೆಕ್ಷನ್ 2ನೇ ಸಬ್-ಸೆಕ್ಷನ್ (ಎಚ್) ಖಂಡದ ಅಡಿಯಲ್ಲಿನ ಪ್ರಕಾರ್ಯಗಳು; 24ನೇ ಸೆಕ್ಷನ್ (ಎ), (ಬಿ), (ಎಫ್), (ಎಚ್), (ಜೆ), (ಕೆ) ಮತ್ತು (ಎಲ್) ಖಂಡಗಳ ಅಡಿಯಲ್ಲಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು ಮತ್ತು 51ನೇ ಸೆಕ್ಷನ್ (ಎ) ಮತ್ತು (ಬಿ) ಖಂಡಗಳು ಮತ್ತು 56ನೇ ಸೆಕ್ಷನ್‌ಗಳ ಅಡಿಯಲ್ಲಿನ ಹೆಚ್ಚುವರಿ ಅಧಿಕಾರಗಳು. |

ಈ ಆದೇಶವು 27ನೇ ಜುಲೈ 2020 ರಿಂದ ಜಾರಿಗೆ ಬಂದಿದೆ ಎಂಬುದಾಗಿ ಭಾವಿಸತಕ್ಕದ್ದು.

**(ಟಿ.ಎಂ. ವಿಜಯ್ ಭಾಸ್ಕರ್)**
ಮುಖ್ಯ ಕಾರ್ಯದರ್ಶಿ ಮತ್ತು
ಅಧ್ಯಕ್ಷರು
ರಾಜ್ಯ ಕಾರ್ಯಕಾರಿ ಸಮಿತಿ

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.